ಕೇಳ್ತೀಯಲ್ಲ, ಇವನೇ ಕಣಪ್ಪ ನನ ರಾಜ, ನನ ಬಂಗಾರ' ಎಂದು ಭಾವುಕಳಾದಳು. 'ಎಂತ ಚೂಟಿಯಾಗಿದನೆ ಗ್ವತ್ತೈತ ರಾಜಣ್ಣ, ಈ ನನ ರಾಜಾ! ಸಿಲೇಟಲ್ಲಿ ಅಕ್ಷರನೆಲ್ಲ ಬರುದು ಕೂಡಿಸಿಕೆಂಡು ಓದ್ಕೆಂತಾನೆ! ಯೇಳವ್ವ ನನಮಗನೆ, ರಾಜಣ್ಣಂಗೆ ನಾನು ಬಸಾವ ಯೇಳು' ಅಂದಳು. ಹುಡುಗ ಥಟ್ಟಂತ ಮೇಲಕ್ಕೆದ್ದಿದ್ದೇ ಶಿಸ್ತಾಗಿ ಕೈ ಕಟ್ಟಿಕೊಂಡು,

ಪಾಟಾ ವಂದು

ಅವಾನು ಬಸವಾ

ಅವಾಳು ಕಮಲಾ

ಬಸಾವ ಯೇಳೂ

ಕಮಲಾ ಯೇಳೂ

ಕಮಾಲ ಬಸಾವನಾ ತಂಗಿ

ಮುಂತಾಗಿ ಲಯಬದ್ಧವಾಗಿ ಪಾಠ ಒಪ್ಪಿಸಿದ್ದನ್ನು ಕಂಡು ಗೌರಕ್ಕ ಮಿರಿಮಿರಿ ಮಿನುಗಹತ್ತಿದಳು. 'ನೋಡುದಾ ರಾಜಣ್ಣ! ಈ ನನಬಂಗಾರ ಒಳ್ಳೇ ಅಮುಲ್ದಾರರ ಕೆಲಸಕ್ಕೆ ಸೇರಿಕೊಂಡು ಅವರವ್ವನ್ನ ಸಾಕತಾನೆ... ಅಲವೇನ್ ನನಮಗನೆ' ಅನ್ನುತ್ತಾ ಕೆನ್ನೆ ನೀವಿ ನಟಿಕೆ ಚಟಗುಟ್ಟಿಸಿದಳು. ಹುಡುಗ 'ಊಂ' ಅನ್ನುತ್ತಾ ಕತ್ತು ಹಾಕಿತು. ಗೌರಕ್ಕ ಹುಡುಗನ್ನ ಬಾಚಿ ಎದೆಗವಚಿಕೊಂಡಳು. ರಾಜಣ್ಣ 'ಬಡ್ಡಿಮಗ ಬಲು ಚೂಟಿಯಾಗವನೆ' ಅಂದಾಗಲಂತೂ ಗೌರಕ್ಕ ಅರಳಿಹೋದಳು. ಹೀಗೆ ಅರಳಿದ ಗೌರಕ್ಕನ ಮುಖವನ್ನು ಮದುವೆಯಾದ ಮಾರನೇ ದಿನ ನೋಡಿದ್ದು ಬಿಟ್ಟರೆ ತಿರುಗಿ ಕಂಡದ್ದು ಈವತ್ತೇ...

ಅವತ್ತು ಪ್ರಸ್ತದ ಮಾರನೇ ದಿನ ನೀರುಮನೆ ಬಾಗಿಲಲ್ಲಿ ನಿಂತ ಗೌರಕ್ಕನ್ನ ಕಂಡು, ಹಲ್ಲುಜ್ಜಿಕೊಂಡು ನಿಂತಿದ್ದ ರಾಜಣ್ಣ 'ಹೆಂಗಿತ್ತು ಗೌರಕ್ಕ' ಅಂದು ಕಣ್ಣು ಹೊಡೆದಾಗ 'ಥೂತ್ ನೀನ್ ಬಿಡು ರಾಜಣ್ಣ, ಕ್ಯಟ್ಟು ಕ್ಯರ ಹಿಡುದದೀಯ' ಎನ್ನುತ್ತಾ ನಾಚಿ ಚಿಗರೇಮರಿಯಂತೆ ಕೋಣೆಯೊಳಕ್ಕೆ ಓಟ ಕಿತ್ತಿದ್ದಳು. ಇದಾದ ಒಂದೇ ವಾರಕ್ಕೆ ಇವಳ ಕೈಯ ಕಿರುಬೆರಳ ಉಂಗುರ ಬೇಕೆಂದು ಗಂಡ ತನ್ನ ಮೈಯ ಮೇಲೆ ಮಡಿಸಿದ್ದ ಬಾಸುಂಡೆಯ ಗೀರು ತೋರಿಸಿ ಬಿಕ್ಕಲು ಶುರು ಮಾಡಿದ್ದಳು. 'ಆ ಗಂಡಾನ್ನೋ ಸೂಳೇಮಗನ್ನ ಕಡುದು ಬಿಡಬೇಕು' ಎಂದು ರಾಜಣ್ಣ ಎಗರಿ ಬಿದ್ದಾಗ 'ನೀನು ಸುಮ್ಮಕಿರಪ್ಪ ದಮ್ಮಯ್ಯ. ಸಂಸಾರ ಅಂದ ಮ್ಯಾಲೆ ಇವು ಇದ್ದುದ್ದೇ' ಅಂದು ಇವನನ್ನೇ ಸಮಾಧಾನ ಮಾಡಿ ಊರಿಗೆ ಕಳಿಸಿದ್ದಳು. ರಾಜಣ್ಣ ಇನ್ನೊಂದು ರಜಕ್ಕೆ ಬಂದಾಗ, ಆವತ್ತು ಊರು ಬಿಟ್ಟ ಗಂಡನೆಂಬ ಸರದಾರ 'ನಾಲ್ಕು ತಿಂಗಳಾದರೂ ಇತ್ತ ತಲೆಯಿಕ್ಕಿಲ್ಲ' ಎಂಬುದನ್ನು ಉಬ್ಬಿದ ಹೊಟ್ಟೆ ಮುಟ್ಟಿಕೊಂಡು ಹೇಳಿಕೊಂಡು ಬಿಕ್ಕಳಿಸಿದ್ದಳು. ಆವತ್ತು ಇಳಿಬಿದ್ದು ಹೋದವನು ಗೌರಕ್ಕ ಹೆತ್ತು ಮೂರು ತಿಂಗಳ ಕೂಸು ತೂಗುತ್ತಾ ಕೂತಿದ್ದಾಗ ಬಂದಿದ್ದ. 'ಏನೂ ತಿಳಕಬ್ಯಾಡ, ಹಂಗಾಯಿತು ಹಿಂಗಾಯಿತು' ಎಂದೆಲ್ಲಾ ಕತೆ ಹೊಸೆದು ಮತ್ತೆ ಮೂರು ತಿಂಗಳು ಗೂಟ ಬಡಕೊಂಡವನಂತೆ ಕೂತು ಈ ಸಲ 'ನಮ್ಮೂರಲಿ ಮನೇ ಕಟ್ಟಿಸುತಿದೀನಿ ಒಂದೀಟು ಕೈಕಚ್ಚದೆ' ಅಂದು ಗೌರಕ್ಕನ ಕೊರಳ ಕಾಸಿನ ಸರ ಹಿರಿದುಕೊಂಡು ಹೋದವನು ತಿರುಗಿ ಬಂದದ್ದು ಇನ್ನೊಂದು ಬೆಕ್ಕಿನಮರಿಯಂಥ ಹುಡುಗ ಹುಟ್ಟಿದಾಗಲೇ... ಅದೂ ಗೌರಕ್ಕನ ಹಸಿ ಮೈಯ ಮೇಲೆ ಬಾರುಕೋಲು ಬರೆ ಮೂಡಿಸಿ ಕಿವಿಯ ವಾಲೆ ಹರಿದುಕೊಂಡು ಹೋಗಲು...

ಇವೆಲ್ಲ ನೆನಪಾಗಿ, 'ಬೋಳಿಮಗ ಬರೇ ತುಂಬಿಸಿಹೋಗೋಕೆ ಕಟ್ಟಿಕೊಂಡವನಂತ?' ಎಂದುಕೊಂಡು ರಾಜಣ್ಣ ಅವುಡು ಕಚ್ಚಿದ. ಆದರೆ ಆಡಲು ಬಾಯೇಳಲಿಲ್ಲ. ಇಲ್ಲೇ ಹಿಂಗೇ